*

**ಓಎಸ್ ನಂಃ 77/2016**

**ಪಿಡಬ್ಲೂಃ 1**

**<u>ಸಾಕ್ಷಿಗೆ ದಿನಾಂಕ 09-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಮುಂದುವರಿದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ ಎಸ್.ಪಿ.ಎಸ್. ವಕೀಲರಿಂದ</u>

ನನ್ನ ಗಂಡನ ಹೆಸರು ಸಂಜೀವ್ ಕುಮಾರ್ ಆಗಿರುತ್ತದೆ. ನನ್ನ ಗಂಡನ ಹೆಸರು ಚುನಾವಣಾ ಗುರುತಿನ ಚೀಟಿಯಲ್ಲಿ ತಪ್ಪಾಗಿ ಸಂಜಯ್ ಎಂದು ನಮೂದಾಗಿದೆ. ನನ್ನ ಗಂಡನ ಅಡ್ಡ ಹೆಸರು ಗಾಯಕ್ ವಾಡ್ ಆಗಿದ್ದು ನಾನು ಅದನ್ನು ನನ್ನ ದಾವೆಯಲ್ಲಿ ನಮೂದು ಮಾಡಿರುತ್ತೇನೆ. ನಾನು ಈಗ ವಾಡಿ ಪುರಸಭೆಯಲ್ಲಿ ಪೌರ ಕಾರ್ಮಿಕಳಾಗಿ ಕೆಲಸ ಮಾಡುತ್ತಿದ್ದೇನೆ. ಈಗ ನೀವು ಕೆಲಸ ಮಾಡುವ ಕಛೇರಿಯಲ್ಲಿ ನಿಮ್ಮ ಗಂಡನ ಹೆಸರನ್ನು ನೀವು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅದರ ಬಗ್ಗೆ ದಾಖಲಾತಿ ನೀಡಿಲ್ಲ, ಅವಶ್ಯಕತೆ ಬಿದ್ದರೆ ಹಾಜರುಪಡಿಸುತ್ತೇನೆ. ಸಾಕ್ಷಿ ಮುಂದುವರಿದು ನನ್ನ ತಂದೆಯ ಮರಣದ ನಂತರ ನನಗೆ ಅನುಕಂಪದ ಆಧಾರದ ಮೇಲೆ ಕೆಲಸ ಸಿಕ್ಕಿದೆ ಎಂದು ನುಡಿಯುತ್ತಾರೆ. ನಿಮ್ಮ ಈಗಿನ ಕೆಲಸದ ರೆಕಾರ್ಡ್ ಗಳಲ್ಲಿ ನಿಮ್ಮ ಗಂಡನ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಆದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವ ದಾಖಲೆಗಳನ್ನು ಹಾಜರುಪಡಿಸಿ ನೀವು ಸಂಜೀವ್ ಕುಮಾರ್ ಇವರ ಹೆಂಡತಿ ಎಂದು ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ನಾನು ನಿಪಿ-1ರಿಂದ 4 ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ 2 ಮತ್ತು 3ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

(ಅಭಿಷೇಕ್ ರಾಮಚಂದ್ರ ಜೋಶಿ)
ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.